ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು

ಸಿಸಿ7765/2021

| | | |
|---|---|---|
| ಸಾಕ್ಷಿದಾರರ ಹೆಸರು | - ಮರಿಲಿಂಗಯ್ಯ | ಚಾಸಾ-1 |
| ತಂದೆಯ ಹೆಸರು | - ಲೇ ಜೋಪಡಿಲಿಂಗಯ್ಯ | ಫ್ರಾಸಾ-1 |
| ವಯಸ್ಸು | - 50 ವರ್ಷ | |
| ಉದ್ಯೋಗ | - ಮುಖ್ಯ ಪೇದೆ, ಹಲಗೂರು ಪೋ ಠಾಣೆ | |
| ವಾಸಸ್ಥಳ | - ಮಳವಳ್ಳಿ | |

ದಿನಾಂಕಃ- 23-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎಪಿಪಿ ರವರಿಂದಃ-**

ನಾನು 2018 ಮಾರ್ಚ್ ರಿಂದ 2022 ನವೆಂಬರ್ ಮುಖ್ಯಪೇದೆಯಾಗಿ ಮದ್ದೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸಿದ್ದೆನೆ.

ದಿನಾಂಕ 19-09-2021 ರಂದು ನಾನು ಹಗಲು ಠಾಣಾ ಕರ್ತವ್ಯದಲ್ಲಿದ್ದಾಗ ಮದ್ದೂರು ಟೌನ್ ನ, 1 ನೇ ಕ್ರಾಸ್ ನಲ್ಲಿರುವ ಶಾಸಕರಾದ ತಮ್ಮಣ್ಣರವರ ಮನೆಯ ಬಳಿ ಆರೋಪಿಯು ಸಾರ್ವಜನಿಕವಾಗಿ ಅವಾಚ್ಯ ಶಬ್ಧಗಳಿಂದ ಬೈದು ಗಲಾಟೆ ಮಾಡುತ್ತಿದ್ದಾನೆಂದು ದೂರು ಬಂದಿದೆ ಎಂದು ಚಾಸಾ-10 ರವರು ನನ್ನನ್ನು ಕರೆದು ಗಲಾಟೆ ಆಗುತ್ತಿದ್ದೆ ಎಂದು ನನ್ನನ್ನು ಮತ್ತು ಚಾಸಾ-2 ರವರನ್ನು ಗಲಾಟೆ ಆಗುತ್ತಿದ್ದೆ ಸ್ಥಳಕ್ಕೆ ಹೋಗಿ ಎಂದು ಹೇಳಿದ ಮೇರೆಗೆ ನಾನು ಮತ್ತು ಚಾಸಾ-2 ರವರು ಸುಮಾರು 12-15 ಗಂಟೆಗೆ ಸ್ಥಳಕ್ಕೆ ಹೋದಂತಹ ಸಮಯದಲ್ಲಿ ಆರೋಪಿ ನಾಗರಾಜು ಅವಾಚ್ಯ ಶಬ್ಧಗಳಿಂದ ಸಾರ್ವಜನಿಕವಾಗಿ ಬೈಯುತ್ತಿದ್ದಾಗ ಈ ರೀತಿ ಮಾಡುವುದು ಸರಿಯಿಲ್ಲವೆಂದು ತಿಳುವಳಿಕೆ ಹೇಳಿದರೂ ಸಹ ನನ್ನನ್ನು ಉದ್ದೇಶಿಸಿ ನೀವು ಯಾರು ನನ್ನನ್ನು ಕೇಳಲು ಎಂದು ಕೈಯಿಂದ ನಮಗೆ ಹೊಡೆದು ನನ್ನನ್ನು ಹಿಡಿದು ಎಳೆದಾಡಿ ನನ್ನ ಎಡಗೈಯನ್ನು ನುಳಿದು ಬಲಗೈ ಬೆರಳನ್ನು ನುಳಿದು ನೋವುಂಟು ಮಾಡಿರುತ್ತಾರೆ. ಹಾಗೂ ನನ್ನೊಂದಿಗೆ ಬಂದಿದ್ದಂತಹ ಚಾಸಾ-5 ರವರ ಎಡಗೈ ಯನ್ನು ಕಚ್ಚಿ ಬಲಗೈಯನ್ನು ನುಳಿದು ನೋವುಂಟು ಮಾಡಿ, ನಮ್ಮ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು ಅಲ್ಲಿದ್ದ ಸಾರ್ವಜನಿಕರಾದ ಚಾಸಾ-3 ಮತ್ತು ಇತರರ ಸಹಾಯದಿಂದ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು , ಚಾಸಾ-10 ರವರ ಮುಂದೆ ಹಾಜರುಪಡಿಸಿ, ನಂತರ ನಾನು ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದು ವಾಪಸ್ ಠಾಣೆಗೆ ಬಂದು, ಆರೋಪಿಯ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ದೂರನ್ನು ನೀಡಿರುತ್ತೇನೆ.

ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ,ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1 ಎ ಎಂದು ಗುರುತಿಸಲಾಯಿತು. ವೀಡಿಯೋ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಿದ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿಯ ಪರ ಎಲ್ ಡಿ ಸಿ ವಕೀಲರಾದ ಶ್ರೀಮತಿ ವೈ ಸಿ ಪಿ ರವರಿಂದಃ-</u>**

ಚಾಸಾ-10 ರವರಿಗೆ ದೂರವಾಣಿ ಮುಖಾಂತರ ಯಾರು ವಿಷಯವನ್ನು ತಿಳಿಸಿರುತ್ತಾರೆಂದು ನನಗೆ ಗೊತ್ತಿಲ್ಲ. ಈ ಹಿಂದೆಯೂ ಸಹ ಆರೋಪಿಯ ವಿರುದ್ಧ ಮದ್ದೂರು ಠಾಣೆಯಲ್ಲಿ ಹಲವಾರು ಪ್ರಕರಣಗಳು ಶಾಸಕರ ಮನೆಯ ಮುಂದೆಯೇ ಗಲಾಟೆ ನಡೆಯುತ್ತಿದೆ ಎಂದು ಹೇಳಿ ಪ್ರಕರಣಗಳು ದಾಖಲಾಗಿರತ್ತದೆ ಎಂದರೆ ಸಾಕ್ಷಿಯು ಇನ್ನೊಂದು ಪ್ರಕರಣ ದಾಖಲಾಗಿರುತ್ತದೆ ನುಡಿದಿರುತ್ತಾರೆ. ನಾನು ಆರೋಪಿಯನ್ನು ಯಾರನ್ನು ಉದ್ದೇಶಿಸಿ ಅವಾಚ್ಯ ಶಬ್ಧಗಳಿಂದ ಉಪಯೋಗಿಸಿ ಬಯ್ಯುತಿದ್ದೀಯಾ ಎಂದು ವಿಚಾರಣೆ ಮಾಡಿರುತ್ತೇನೆ. ನಾನು ಆರೋಪಿಯನ್ನು ವಿಚಾರಿಸಲು ಹೋದಂತಹ ಸಮಯದಲ್ಲಿ ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ ಮತ್ತು ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಹಲವಾರು ಪ್ರಕರಣಗಳು ದಾಖಲಾಗಿರುತ್ತವೆ ಎಂಬ ಕಾರಣಕ್ಕೆ ನಾನೇ ನಿಪಿ-1 ನ್ನು ಠಾಣೆಯಲ್ಲಿ ಕುಳಿತು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿರುವ ವಿಚಾರಗಳೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ನಿಪಿ-1 ರಂತೆ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಶಿಕ್ಷೆ ಕೊಡಿಸಬೇಕೆಂಬ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಎರಡನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ